## ಪ್ರಾರ್ಥನೆ

# ಕೊನೆಯ ಮಾತು

ಪ್ರಾರ್ಥನೆಯನ್ನು ಕುರಿತು ಒಂದು ಅಧ್ಯಯನವು ದೇವರ ಮೇಲೆ ಕೇಂದ್ರೀ ಕರಿಸುವಿಕೆಯಾಗಿದೆ. ದೇವರು ದೇವರಾಗಿದ್ದಾನೆ, ಮತ್ತು ಮನುಷ್ಯನು ದೇವರಾಗಿರುವದಿಲ್ಲ; ದೇವರು ದೇವರಾಗಿದ್ದಾನೆ; ಮತ್ತು ನಾನು ದೇವರಾಗಿರುವದಿಲ್ಲ. ಆದುದರಿಂದ, ಪ್ರಾರ್ಥನೆಯ ಯೋಚನೆಯು ದೀನರನ್ನಾಗಿ ಮಾಡುತ್ತದೆ. ಅದು ನೇರ ಉತ್ತರಗಳಿಗಿಂತ ಹೆಚ್ಚಾಗಿ ಹೆಚ್ಚು ಪ್ರಶ್ನೆಗಳೊಂದಿಗೆ ಅಂತ್ಯಗೊಳ್ಳುತ್ತದೆ. ಅದು ಪರಿಹಾರಗಳೊಂದಿಗೆ ಅಲ್ಲ, ಆದರೆ ದೇವರೊಂದಿಗೆ ಅಂತ್ಯಗೊಳ್ಳುತ್ತದೆ.

ಕ್ರೈಸ್ತರು ದೇವರನ್ನು ಹುಡುಕುತ್ತಾರೆ. ತಿಳಿಯಲು ಮತ್ತು ಆತನ ಚಿತ್ತದಲ್ಲಿ ಕಂಡುಕೊಳ್ಳಲ್ಪಡಲು ನಾವು ಬಯಸುತ್ತೇವೆ. ಹೀಗೆ ಪ್ರಾರ್ಥನೆಯು ದೇವರ ಚಿತ್ತವನ್ನು ಒಳಗೊಂಡಿರುತ್ತದೆ. ಹೆಚ್ಚಾದಸಲ, ನಾವು ಹೆಚ್ಚಾಗಿ ಆತನ ಚಿತ್ತವನ್ನು ಹುಡುಕುವಾಗ, ಅದರ ಬಗ್ಗೆ ನಾವು ಕಡಿಮೆಯಾದದ್ದನ್ನು ತಿಳಿದುಕೊಳ್ಳುವೆವು ದೇವರು ಕೇವಲ ಜ್ಞಾನವಷ್ಟೇ ಅಗಿರುವದಿಲ್ಲ; ಪ್ರಾರ್ಥನೆಯು ಬೈಬಲ್ ಆಗಿರುವದಿಲ್ಲ. ಆದುದರಿಂದ ಪ್ರಶ್ನೆಗಳು ಉಳಿದುಕೊಳ್ಳುತ್ತವೆ:

ನಮಗಾಗಿ - ದೇವರಿಗೆ ಒಂದು ಚಿತ್ತವಿದೆಯೋ? ದೇವರು ಆ ಚಿತ್ತವನ್ನು ವ್ಯಕ್ತಪಡಿಸುವನೋ ಇಲ್ಲವೇ ಅಡಗಿಸಿ ಇಡುವನೋ? ಅದನ್ನು ಕಂಡುಕೊಳ್ಳ ಲಿಕ್ಕೆ ಅಂಥ ನೋವುಳ್ಳ ದೂರಕ್ಕೆ ನಾವು ಯಾಕೆ ಹೋಗಬೇಕು? ಆತ್ಮಿಕತೆಯನ್ನು ದೈವಜ್ಞಾನ ಶಾಸ್ತ್ರದಿಂದ ನಾವು ಆಗಲಿಸಬಹುದೋ? ದೈವಜ್ಞಾನ ಶಾಸ್ತ್ರವನ್ನು ಬಿಟ್ಟು ದೇವರೊಂದಿಗೆ ನಾವು ಹೋರಾಡಬಹುದೋ? ದೇವರ ಚಿತ್ತವನ್ನು ಕಂಡುಕೊಳ್ಳು ವುದು ಪರಿಶುದ್ಧ ಬರಹದ ವಿಚಾರವೋ? "ದೇವರ ಚಿತ್ತ"ದ ಬೈಬಲಿನ ನಿರೂಪಣೆ ಯಾವುದು? ದೇವರ ಚಿತ್ತವನ್ನು ಕಂಡುಕೊಳ್ಳಲು ಪ್ರಯತ್ನಿಸುವಲ್ಲಿ ನಾವು ತಪ್ಪಾದ ವಿಚಾರಿಸುವಿಕೆಯನ್ನು ಉಪಯೋಗಿಸುವೆವೋ? ಬೈಬಲನ್ನು ಬಿಟ್ಟು ದೇವರ ಮನಸ್ಸನ್ನು ನಾವು ತಿಳಿಯಬಹುದೋ? "ಕುರಿಯ ತುಪ್ಪಟವನ್ನು ಹೊರಗೆ ಹಾಕುವುದು" ಯಾಕೆ ವ್ಯರ್ಥವಾದದ್ದಾಗಿದೆ?

ದೇವರ ನಂಬಿಕೆಯಲ್ಲಿ ನಾವು ಪ್ರಾರ್ಥಿಸುತ್ತೇವೆ! ಹೆಬೇಲನು ದೇವರನ್ನು ನಂಬಿದನು, ಮತ್ತು ಅವನು ಸತ್ತುಹೋದನು. ಹನೋಕನು ದೇವರೊಂದಿಗೆ ನಡೆದನು, ಮತ್ತು ಅವನು ಸಾಯಲಿಲ್ಲ. ನೋಹನು ದೇವರಿಗೆ ವಿಧೇಯನಾದನು ಮತ್ತು ಇತರ ಎಲ್ಲರೂ ಸತ್ತು ಹೋದರು. ನಾವು ಯಾವುದನ್ನು ನಂಬುತ್ತೇವೆಯೋ ಅದರಿಂದ ನಮ್ಮ ಜೀವಿತಗಳು ಬದಲಾಗುತ್ತವೆ. ದೇವರ ಚಿತ್ತವನ್ನು ಕಂಡುಕೊಳ್ಳು ವದಕ್ಕಾಗಿ ನಾವು ಪರಿಶುದ್ಧ ಬರಹಗಳನ್ನು ತಿಳಿದುಕೊಳ್ಳಬೇಕು. ಆತನ ಚಿತ್ತವನ್ನು ಕಂಡುಕೊಳ್ಳುವದಕ್ಕಾಗಿ ನಾವು ದೇವರನ್ನು ತಿಳಿಯತಕ್ಕದ್ದು. ಆತನಂತೆ ನಾವು ಹೆಚ್ಚಾಗಿ ಇರುವಾಗ ಆತನ ಚಿತ್ತವನ್ನು ನಾವು ಚೆನ್ನಾಗಿ ಅರ್ಥಮಾಡಿಕೊಳ್ಳುವುದು ಸ್ಪಷ್ಟವಾಗಿದೆ. ಪ್ರಾರ್ಥನೆಯು ಒಂದು ಸಂಬಂಧವನ್ನು ಒಳಗೊಂಡಿರುತ್ತದೆ. ದೇವರ ಚಿತ್ತವನ್ನು ಕಂಡುಕೊಳ್ಳು ವುದು ಆತನೊಂದಿಗೆ ನಮ್ಮ ಸಂಬಧದ ಮೇಲೆ ಅವಲಂಭಿಸಿರಬೇಕು - ವಿಶೇಷ ಸಂಕೇತಗಳ ಮೇಲೆ ಅಲ್ಲ. ಆದುದರಿಂದ, ಆತನ ಚಿತ್ತವು ಅಡಗಿಸಲ್ಪಡುವ ಇಲ್ಲವೇ

ಜಾರಿಕೊಳ್ಳುವ, ಒಂದು ಗೂಢಪ್ರಶ್ನೆ, ಒಂದು ಒಗಟು ಆಗುವ ಅಗತ್ಯತೆಯಿರುವದಿಲ್ಲ. ದೇವರು ತಿಳಿಯುತ್ತಾನೆ, ದೇವರು ತಿಳಿಯಲ್ಪಡಲು ಬಯಸುತ್ತಾನೆ. ಸರಳವಾದ, ಶಿಶುಭಾವದ, ವಿಧೇಯ ವಿಶ್ವಾಸದಲ್ಲಿ ದೇವರು ನಮ್ಮನ್ನು ತನ್ನ ಚಿತ್ತದೊಳಗೆ ಬಿಡುತ್ತಾನೆ, ನಮ್ಮನ್ನು ನಾವು ತಿಳಿದುಕೊಳ್ಳುವುದು ನೋವಿನದಾಗಿದೆ. ದೇವರನ್ನು ತಿಳಿದುಕೊಳ್ಳುವುದು ನೋವಿನದಾಗಿದೆ. ಆದಾಗ್ಯೂ ಎಂಥಾ ಸದಾವಕಾಶ! ಆದುದರಿಂದ, ನಾವು ಸಮರ್ಪಿಸಿಕೊಳ್ಳುತ್ತೇವೆ; ನಾವು ಅಧೀನರಾಗುತ್ತೇವೆ; ನಾವು ಸೇವೆ ಮಾಡುತ್ತೇವೆ. ಆಗ ಪರಲೋಕದ ದೇವರು ನಾವು ಯೋಚಿಸುವದಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಆಶೀರ್ವದಿಸುತ್ತಾನೆ. ನಾನು ನನ್ನ ಜೀವಿತವನ್ನು ಜೀವಿಸಿದ್ದೇನೆ. ಇಲ್ಲ. ನಾನು ಯೋಚಿಸಿದಂತೆ, ನಾನು ಕಾರ್ಯಕ್ರಮ ಮಾಡಿದಂತೆ ನಾನು ಸಾಧಿಸಲಿಲ್ಲ; ಆದರೆ ಅದು ಚೆನ್ನಾಗಿದೆ - ಎಷ್ಟೋ ಹೆಚ್ಚು ಉತ್ತಮವಾಗಿದೆ! ದೇವರು ದೇವರಾಗಿದ್ದಾನೆ! ದೇವರು ಒಳ್ಳೆಯವನಾಗಿದ್ದಾನೆ! ದೇವರಿಲ್ಲದೇ ಜನರು ಹೇಗೆ ಜೀವಿಸಬಹುದು?

"ಪರಿಶುದ್ಧ ಬರಹದಲ್ಲಿ ಪರಿಚಿತವಾದದ್ದು ಹೆಚ್ಚು ನಿಕಟವಾಗಿ ಓದಲ್ಪಡತಕ್ಕದ್ದು" ಎಂಬುದನ್ನು ನಾವು ಕಲಿತುಕೊಂಡಿದ್ದೇವೆಯೋ? ನಾವು ಪ್ರಾರಂಭಿಸಿದ್ದಕ್ಕೆ ಹಿಂದಿರುಗಿರಿ: ಲೂಕ 11. ಶಿಷ್ಯರು ನಮ್ಮೆಲ್ಲರಿಗಾಗಿ "ಪ್ರಾರ್ಥಿಸುವದನ್ನು ನಮಗೆ ಕಲಿಸು" ಎಂದು ಮಾತಾಡಿದರು. ಒಂದು ಪ್ರಾರ್ಥನೆಯೊಂದಿಗೆ ಯೇಸುವು ಅವರ ಬಿನ್ನಹಕ್ಕೆ ಉತ್ತರ ಕೊಟ್ಟನು. ಅದು "ಮಾದರಿಯ ಪ್ರಾರ್ಥನೆ" ಆ ಮೇಲೆ ಆತನು ಇಂದು ಕಡೆಗಣಿಸಿದ ಮತ್ತು ತಪ್ಪಾಗಿ ಅರ್ಥ ಮಾಡಿಕೊಂಡ ಹೃದಯ ಸ್ಪರ್ಶಿಯಾದ ಸಾಮ್ಯವನ್ನು ಹೇಳಿದನು: "ಹದ್ದುಮೀರಿದ ಸ್ನೇಹಿತ."

ಕ್ರೈಸ್ತರು ಮಕ್ಕಳಾಗಿದ್ದಾರೆ. ತಂದೆತಾಯಿಗಳು ಮಧ್ಯರಾತ್ರಿಯಲ್ಲಿ ಪ್ರೀತಿಯಿಂದ ತಮ್ಮ ಮಕ್ಕಳ ಅಗತ್ಯತೆಗಳನ್ನು ಬಯಸುವಿಕೆಗಳನ್ನು ಪೂರೈಸುತ್ತಾರೆ. ಮಕ್ಕಳು "ಬಾಗಿಲುಗಳನ್ನು ತಟ್ಟುವ" ಅವಶ್ಯಕತೆ ಇರುವದಿಲ್ಲ. ಪ್ರಾರ್ಥನೆಯು "ಹದ್ದು ಮೀರಿದ ಸ್ನೇಹಿತರಿಗಾಗಿ" ಇರುವದಿಲ್ಲ. ಪ್ರಾರ್ಥನೆಯು ದೇವರ ಪ್ರೀತಿಯಲ್ಲಿ ಸುರಕ್ಷಿತತೆಯಿಂದ ಇರುವ ಮಕ್ಕಳಿಗಾಗಿ ಇರುತ್ತದೆ. "ಕೆಟ್ಟವರಾವ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪರಿಶುದ್ಧಾತ್ಮವರವನ್ನು ಕೊಡುವನಲ್ಲವೇ?" (ಲೂಕ 11:13).

***"ಮೊದಲು ಪ್ರಾರ್ಥಿಸಿರಿ."***

© 2009 Truth for Today